

# ಅಲ್ಕರಾಜ್

## ಟೆನಿಸ್ ಹೊಸ ಮಿಂಚು

**ಈ ವರ್ಷ ಲಯ ಕಂಡುಕೊಳ್ಳುವ ಮೊದಲು ನಾಲ್ಕುವರೆ ತಿಂಗಳಿಗೂ ಹೆಚ್ಚು ಕಾಲ ಅಲ್ಕರಾಜ್ ವೃತ್ತಿಪರ ಟೆನಿಸ್ ಆಡಲು ಆಗಿರಲಿಲ್ಲ. ಉದರದ ನೋವು ನೀಗಿಕೊಂಡು ಅವರು ಪುಟಿದೆದ್ದ ರೀತಿಯಲ್ಲೇ ಆಟಪ್ರೀತಿ ತುಳುಕುತ್ತದೆ. 19ರ ಈ ಆರಡಿ ಒಂದಿಂಚು ಹುಡುಗ ಟೆನಿಸ್‌ನ ಕಟೌಟ್ ಆಗುವ ಎಲ್ಲ ಲಕ್ಷಣಗಳೂ ಇವೆ.**

■ ವಿಶಾಖ ಎನ್.

ಕಾರ್ಲೋಸ್ ಅಲ್ಕರಾಜ್ ಗಾರ್ಫಿಯಾ ಮೊದಲ ಸಲ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಈ ವರ್ಷ ಸೆಮಿಫೈನಲ್ಸ್ ಪ್ರವೇಶಿಸಿದಾಗ ಅವರ ತರಬೇತುದಾರ ಜುಆನ್ ಕಾರ್ಲೋಸ್ ಫೆರೆರೊ ಮುಖ ಮೊರದಗಲ. ಈಕ್ವೆಲೈಟ್ ಅಕಾಡೆಮಿಯಲ್ಲಿ ಫೆರೆರೊ ರೂಪಿಸಿರುವ ತರಬೇತಿ ಪ್ರಕ್ರಿಯೆಯ ಯಾವ ಹಂತವನ್ನೂ ಅಲ್ಕರಾಜ್ ತಪ್ಪಿಸುವುದಿಲ್ಲ. ಜ್ಯುಆಂಜೋ ಮೊರೆನೊ ಸೂಚಿಸುವ ಯಾವ ವ್ಯಾಯಾಮವನ್ನೂ ಮಾಡದೇ ಬಿಡುವುದಿಲ್ಲ. ಜ್ಯುಆಂಜೋ ಬರೀ ವ್ಯಾಯಾಮ ಹೇಳಿಕೊಡುವವರಷ್ಟೇ ಅಲ್ಲ, ಅವರು ಫಿಸಿಯೊಥೆರಪಿಸ್ಟ್. ಅಲ್ಕರಾಜ್ ದೇಹದಲ್ಲಿ ಸದಾ ಒಬ್ಬ ಅಥ್ಲೀಟ್ ಜೋರಾಗಿ ಉಸಿರಾಡುತ್ತಿರುವಂತೆ ಮಾಡುವ ಕೆಲಸ ಅವರದ್ದು.

ಸದಾ ಉತ್ಸಾಹದ ಬುಗ್ಗೆಯಂತೆ ಕಾಣುವ ಅಲ್ಕರಾಜ್, ಕೆಲಸಕ್ಕೆ ಇಳಿದರೆ ನಗುವನ್ನೆಲ್ಲ ಅಳಿಸಿಹಾಕಿ ಗಂಭೀರವಾಗಿ ಕುಳಿತು ಬಿಡುತ್ತಾರೆ. ಅಂಗಳದಲ್ಲಿ ಆಡಲು ಇಳಿದಾಗ ಅದನ್ನೂ ಬದುಕಿನ ಮಹತ್ವದ ಕೆಲಸ ಎನ್ನುವಂತೆ ಭಾವಿಸುವವರ ಪೈಕಿ.

ಎರಡು ವರ್ಷಗಳ ಹಿಂದೆ ಜ್ಯುಆಂಜೋ, ‘ಮಾರ್ಫಾಲಜಿ’ ಮೂಲಕ ಅಲ್ಕರಾಜ್ ದೇಹದ ಮೂಳೆ, ಮಾಂಸಖಂಡಗಳ ಅಧ್ಯಯನ ಮಾಡಿದ್ದನ್ನು ವಿವರಿಸಿದ್ದರು. ಟೆನಿಸ್‌ನಲ್ಲಿ ವೇಗ ಕಾಯ್ದುಕೊಳ್ಳುವಂತೆ ಇಂತಿಷ್ಟೇ ಪ್ರಮಾಣದಲ್ಲಿ ಮಾಂಸಖಂಡಗಳು ಬೆಳೆಯುವಂತೆ ನೋಡಿಕೊಳ್ಳಬೇಕು. ಕಾಲುಗಳ ಸ್ನಾಯುಗಳು ಹೆಚ್ಚು ಶಕ್ತವಾಗಿರಬೇಕು. ಬ್ಯಾಂಕ್‌ಹ್ಯಾಂಡ್ ಹೊಡೆಯಲು ಬೆಂಬಲಿಸುವಂತೆ ಬೆನ್ನುಹುರಿ ಹಾಗೂ ಅದರ ಸುತ್ತಲ ಮಾಂಸಖಂಡಗಳು ಇರಬೇಕು. ಇವನ್ನೆಲ್ಲ ಜ್ಯುಆಂಜೋ ರೂಪಿಸತೊಡಗಿದ ಕಥನವನ್ನು ಇಂಚಿಂಚಾಗಿ ಹೇಳಿಕೊಂಡಿದ್ದರು. ಅದೀಗ ಫಲ ಕೊಡುತ್ತಿದೆ.

ಗ್ರ್ಯಾಂಡ್ ಸ್ಲ್ಯಾಮ್ ಸೆಮಿಫೈನಲ್ ಹಂತಕ್ಕೆ ಅಲ್ಕರಾಜ್ ಕಾಲಿಟ್ಟಿದ್ದು ಇದು ಎರಡನೇ ಸಲ. ಇನ್ನೂ ಇಪ್ಪತ್ತರ ಹರೆಯ. ತಣ್ಣಗಿನ ಮುಖ. ‘ಜೂನಿಯರ್ ನಡಾಲ್’ ಎಂದು ಯಾರೇ ಕರೆದರೂ ಮುಖವನ್ನು ಒಂಥರಾ ಹುಳ್ಳಗೆ ಮಾಡಿಕೊಳ್ಳುತ್ತಾರೆ. ತಮ್ಮನ್ನು ಜನ ತಾವಾಗಿಯೇ ಗುರುತಿಸಬೇಕು ಎನ್ನುವ ಸ್ವಾಭಿಮಾನಿ.

ಫ್ರೆಂಚ್ ಓಪನ್ ಟೆನಿಸ್ ಕ್ವಾರ್ಟರ್ ಫೈನಲ್‌ನಲ್ಲಿ ಅಚ್ಚರಿ ಹುಟ್ಟಿಸುವ ಮಟ್ಟಕ್ಕೆ ಅಲ್ಕರಾಜ್ ಆಟವನ್ನು ಏಕಪಕ್ಷೀಯ ಎನ್ನುವಂತೆ ಮಾಡಿಬಿಟ್ಟರು. ನೇರ ಸೆಟ್‌ಗಳ ಗೆಲುವು ಈ ಹಂತದಲ್ಲಿ ಅದೂ ಇಷ್ಟು ಚಿಕ್ಕಪ್ರಾಯದಲ್ಲಿ ಸಿಗುವುದು ಕಷ್ಟವೇ. ಆಟದ ನಡುವೆ ಅವರು ರ್‍ಯಾಕೆಟ್ ಅನ್ನು ಎಡಗೈಯಲ್ಲಿ ಗಿರಗಿರನೆ ತಿರುಗಿಸುತ್ತಾ ಏಕಾಗ್ರತೆಯನ್ನು ಕಾಯ್ದುಕೊಳ್ಳುವ ವಿಡಿಯೊವೊಂದು ಹರಿದಾಡಿತು. ಅಲ್ಕರಾಜ್ ಮೆದುಳಿನಲ್ಲಿನ ಹುಡುಗುತನ ಹಾಗೂ ಅಂಗಳದಲ್ಲಿನ ವೃತ್ತಿಪರತೆ ಎರಡಕ್ಕೂ ಅದು ಕನ್ನಡಿ ಹಿಡಿಯಿತು.

ನೂರಾನಾಲ್ಕು ದಿನಗಳಾಗಿತ್ತು, ಈ ವರ್ಷ ಅರ್ಜೆಂಟೀನಾ ಓಪನ್ ಟೆನಿಸ್‌ಗೆ ಮೊದಲು ಅಲ್ಕರಾಜ್ ಆಡದೆ, ಅವರ ಉದರಭಾಗದಲ್ಲಿ ಸಮಸ್ಯೆ ಕಾಣಿಸಿಕೊಂಡಿತ್ತು. ಫೆಬ್ರುವರಿಯಲ್ಲಿ ಆ ಟೂರ್ನಿಯ ಫೈನಲ್‌ನಲ್ಲಿ ಬ್ರಿಟನ್‌ನ ನೋರಿ ಅವರನ್ನು ಸೋಲಿಸಿ ಆ ಟೂರ್ನಿ ಗೆದ್ದರು. ದಣಿದಿದ್ದ ಉದರದ ಸ್ನಾಯುಗಳಲ್ಲೆಲ್ಲ ಆಗ ಆನಂದದ ಚಿಟ್ಟೆಯ ಹಾರಾಟ. ‘ಇದು ನಿಜಕ್ಕೂ ವಿಶೇಷ’ ಎಂದು ಆಗ ಅಲ್ಕರಾಜ್ ಹೇಳಿದ್ದು ಆ ನೋವು ನಲಿವಾದ ಕಾರಣಕ್ಕೇ ಇರಬೇಕು. ಅಷ್ಟೇ